<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.</u>

ಸಿಸಿ ನಂ. 202/2023

<u>ಫಿರ್ಯಾದಿ</u> <u>ಆರೋಪಿ</u>

ಮಾತೋಶ್ರೀ ಸೌಹಾರ್ದ ಕ್ರೆಡಿಟ್ ಸಹಕಾರಿ ನಿಯಮಿತ, ವಿರುದ್ಧ **ಮೈನುದ್ದಿನ್ ಇಬ್ರಾಹಿಂ ಶೇಖ್**

ಶಾಖೆ ಕುಮಟಾ.

**<u>ಆರೋಪಿಃ</u>**

ಮೈನುದ್ದೀನ್ ಇಬ್ರಾಹಿಂ ಶೇಖ್ ,
45, ಉ: ಬಿಸಿನೆಸ್, ಸಾಃ ಜನತಾಪ್ಲಾಟ್ , ಮಾಸೂರಕ್ರಾಸ್
ಹೊಲನಗದ್ದೆ, ಕುಮಟಾ.

<u>- ದಂಡ ಪ್ರಕ್ರಿಯಾ ಸಂಹಿತೆ ಕಲಂ.251ರಡಿ ಆಪಾದನೆ -</u>

ನೀವು ಫಿರ್ಯಾದುದಾರ ಸಂಸ್ಥೆಗೆ ಭೇಟಿ ನೀಡಿ ದಿಃ12-03-2020 ರಂದು ನಿಮ್ಮ ವೈಯಕ್ತಿಕ ಅಡಚಣೆಯ ಉದ್ದೇಶದ ಕುರಿತು ರೂ. 23,000/-ಗಳನ್ನು ಸಾಲ ಪಡೆದಿದ್ದು, ಸದರಿ ಸಾಲವು ಕಟಬಾಕಿಯಾಗಿದ್ದರಿಂದ ಅದರ ತಿರುವಳಿಯ ಸಲುವಾಗಿ ನೀವು ದಿಃ 16-02-2021 ರಂದು ಫಿರ್ಯಾದುದಾರ ಸಂಸ್ಥೆಗೆ ಕೆನರಾ ಬ್ಯಾಂಕ, ಕುಮಟಾ ಶಾಖೆಯ ಚೆಕ್ ನಂ. 295965 ನೇದನ್ನು ರೂ. 32,082/- ಕ್ಕೆ ಚೆಕ್ ನ್ನು ನೀಡಿದ್ದು, ಸದರಿ ಚೆಕ್ ನ್ನು ನಗದೀಕರಿಸಲು ಅವರ ಬ್ಯಾಂಕರರಾದ ಆಯ್ ಸಿ ಆಯ್ ಸಿ ಐ ಬ್ಯಾಂಕ್ ಕುಮಟಾ ಬ್ಯಾಂಕ್‌ಗೆ ಹಾಜರು ಪಡಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಹಿಂಬರಹದೊಂದಿಗೆ ಚೆಕ್ ಅಮಾನ್ಯಗೊಂಡು ವಾಪಸ್ಸು ಬಂದಿದ್ದು, ಈ ಕುರಿತು ನಿಮಗೆ ದಿಃ 26-02-2021ರಂದು ವಕೀಲರ ಮುಖಾಂತರ ನೋಂದಾಯಿತ ಅಂಚೆ ನೋಟಿಸು ನೀಡಿದ್ದು, ಸದ್ರಿ ನೋಟಿಸು ನಿಮಗೆ ದಿಃ 03-03-2021 ರಂದು ಜಾರಿಯಾಗಿದ್ದರೂ ಸಹ ನೀವು ಸದ್ರಿ ಚೆಕ್‌ನಲ್ಲಿ ಹೇಳಿರುವ ಹಣವನ್ನು ವಾಪಸ್ಸು ಕೊಡದೇ ಕಲಂ 138 ಎನ್ ಐ ಆಕ್ಟ ನೇದರ ಪ್ರಕಾರ ಅಪರಾಧ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆ ಇದೆ, ಅದಕ್ಕೆ ಏನು ಹೇಳುತ್ತೀರಿ?

<u>**ಪ್ರಶ್ನೆ - 1** ನಿಮ್ಮ ಮೇಲೆ</u> ಹೊರಿಸಲಾದ ಆಪಾದನೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೇ?

<u>ಉತ್ತರ -</u>

**ಪ್ರಶ್ನೆ – 2** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ಪ್ರತಿ ರಕ್ಷೆ ಇದೆಯೆ?

ಉತ್ತರ –

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 06–10–2023.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ